9

# ದೇವರ ಆಲಯ

*"ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16).*

ದೇವರಿಲ್ಲದೇ ಮನುಷ್ಯನ ಬರಿದಾಗಿರುವಿಕೆಯನ್ನು ನೋಡಿದ ಔಗುಸ್ತೀನನು, "ದೇವರೇ, ನಮ್ಮ ಹೃದಯಗಳು ನಿನ್ನಲ್ಲಿ ವಿಶ್ರಾಂತಿ ಕಂಡುಕೊಳ್ಳುವ ವರೆಗೆ ವಿಶ್ರಾಂತಿ ಯಿಂದ ಇಲ್ಲದಿರುವವುಗಳಾಗಿರುವವು" ಎಂದು ಬರೆದನು. ದೇವರು ಮನುಷ್ಯನೊಂದಿಗೆ ಅನ್ಯೋನ್ಯತೆಗಾಗಿ ತನ್ನ ಅಪೇಕ್ಷೆಯಿಂದ ನೋಡುತ್ತ ಹೀಗೆ ಹೇಳುವನೆಂದು ನಂಬುವುದು ಯೋಗ್ಯವಾಗಿದೆ, "ಮಾನವನೇ, ನೀನು ನನ್ನಲ್ಲಿ ವಿಶ್ರಾಂತಿ ಪಡೆಯುವವರೆಗೆ ನನ್ನ ಹೃದಯವು ನಿನಗಾಗಿ ಹಂಬಲಿಸುತ್ತದೆ. ನಾನು ನಿನ್ನನ್ನು ಪ್ರೀತಿಸುತ್ತೇನೆ, ಮತ್ತು ನಿನ್ನ ರಕ್ಷಣೆಯಲ್ಲಿ ಹಾಗೂ ಅನ್ಯೋನ್ಯತೆಯಲ್ಲಿ ಆನಂದಿಸುತ್ತೇನೆ."

ಸರ್ವಶಕ್ತನಾದ ದೇವರು ಮನುಷ್ಯನೊಂದಿಗೆ ಅನ್ಯೋನ್ಯತೆಯಲ್ಲಿ ಇರಲು ಬಯಸುತ್ತಾನೆಂದು ನಿಜವಾಗಿಯೂ ನಾವು ನಂಬುತ್ತೇವೆಯೋ? ಇದು ಆತನ ಅಪೇಕ್ಷೆ ಯಾಗಿರದಿದ್ದರೆ ಯೆಹೋವ ದೇವರು ಈ ವಿಶ್ವವನ್ನು, ಆಕಾಶವನ್ನೂ ಭೂಮಿಯನ್ನೂ ಮನುಷ್ಯನನ್ನೂ ಯಾಕೆ ಸೃಷ್ಟಿಸುತ್ತಿದ್ದನು? ಎಲ್ಲವನ್ನೂ ತಿಳಿದು ಕೊಂಡಿರುವ ಮತ್ತು ಸರ್ವಜ್ಞಾನಿಯಾದ ದೇವರು, ಎಲ್ಲಾ ಸಂಗತಿಗಳನ್ನು ಸೃಷ್ಟಿಸಿದಾತನು ಮನುಷ್ಯನನ್ನು ಬೊಂಬೆಯಂತೆ, ಆಟಿಗೆಯ ವಸ್ತುವಂತೆ, ದಂತ ಕಥೆಗಳ ಶಿಶು ದೇವತೆಗಳ ರೀತಿಯಲ್ಲಿ ತನ್ನ ವಿನೋದಕ್ಕಾಗಿ ಉಂಟು ಮಾಡಿದನೆಂದು ಯಾರು ನಂಬುತ್ತಾರೆ? ಜಗತ್ತಿನ ರಚನೆಯು ಮತ್ತು ಮನುಷ್ಯನ ಆತ್ಮಿಕ ಸಾಮರ್ಥ್ಯವು ಪರಲೋಕಗಳ ಮತ್ತು ಭೂಲೋಕದ ದೇವರು ನಮ್ಮೊಂದಿಗೆ ಅನ್ಯೋನ್ಯತೆಯಲ್ಲಿ ಆನಂದವನ್ನು ಹುಡುಕುತ್ತಾನೆ ಮತ್ತು ಕಂಡುಕೊಳ್ಳು ತ್ತಾನೆ ಎಂದು ವಾದಿಸುವಲ್ಲಿ ಒಂದುಗೂಡುತ್ತವೆ.

ವಿವೇಚನೆಯ ಮುಖಾಂತರ ನಾವು ತೀರ್ಮಾನಿಸುವಂಥದ್ದು ಪರಿಶುದ್ಧ ಬರಹಗಳ ಒಪ್ಪಿಗೆಯೊಂದಿಗಿರುತ್ತದೆ. ದೇವರು ತನ್ನ ಜನರಿಗೆ, "ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು" (2 ಕೊರಿಂಥ 6:16) ಎಂದು ಹೇಳಿರುವನು. ಆತನು ತಾನು ವಿಮೋಚಿಸುವವರನ್ನು ತನ್ನ ಅನ್ಯೋನ್ಯತೆಯಲ್ಲಿ ತರುವನು ಎಂದು ಹೇಳಿರುವನು: "ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರಿ" (2 ಕೊರಿಂಥ 6:18) ಎಂದು ತಿಳಿಸಿರುವನು.

ತನ್ನ ಜನರ ಮಧ್ಯದಲ್ಲಿಯ ದೇವರು ವಾಸಿಸುವದರ ಈ ಸತ್ಯವು ಸಭೆಯೊಂದಿಗೆ ಸಂಬಂಧದಲ್ಲಿ ನೋಡತಕ್ಕದ್ದು. ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಸಭೆಯು ದೇವರ ಆಲಯ, ಆತ್ಮಿಕ ಮನೆ ಆಗಿರುತ್ತದೆ (1 ಪೇತ್ರ 2:5), ಆ ಮನೆಯಲ್ಲಿ ಪ್ರತಿಯೊಬ್ಬ ಕ್ರೈಸ್ತನು ಜೀವಿಸುವ ಕಲ್ಲಿನಂತೆ ಇರುವನು (1 ಪೇತ್ರ 2:5), ಮತ್ತು ಆತ್ಮನಲ್ಲಿ ದೇವರ

ವಾಸಸ್ಥಾನವನ್ನು ಇಡೀಯಾಗಿ ರೂಪಿಸುವನು (ಎಫೆಸ 2:21, 22).

ಸಭೆಯನ್ನು ದೇವರ ಆಲಯದಂತೆ - ಗುರುತಿಸುವುದು ಸಭೆಯ ಸ್ವಭಾವದ ಇನ್ನೊಂದು ಮುಖವಾಗಿರುವುದು. "ದೇವಾಲಯ" ಎಂಬ ಪದವು ಹಳೇ ಒಡಂಬಡಿಕೆಯ ಹೋಲಿಕೆಗಳೊಂದಿಗೆ ವಿಫುಲವಾಗಿದ್ದು, ನಮ್ಮನ್ನು ದೇವರೊಂದಿಗೆ ಸಭೆಯ ಸಂಬಂಧದ ಮತ್ತು ದೇವರೊಂದಿಗೆ ಅದರ ನಡೆಯ ಆಳವಾದ ಅರ್ಥದಲ್ಲಿ ನಮ್ಮನ್ನು ತರುತ್ತದೆ.

ಆದುದರಿಂದ, ಕ್ರಿಸ್ತನ ಸಭೆಯ ಉತ್ತಮ ತಿಳುವಳಿಕೆಗಾಗಿ, "ಸಭೆಯು ಹೇಗೆ ದೇವರ ಆಲಯವಾಗಿದೆ?" ಎಂದು ಕೇಳೋಣ.

## ಒಂದು ಸಂದರ್ಶಿಸುವ ಸ್ಥಳ

ಮೊದಲನೆಯದು, ಸಭೆಯು ದೇವರ ಮತ್ತು ಮನುಷ್ಯನ ಸಂದರ್ಶನದ ಸ್ಥಳ ಎಂಬ ಅರ್ಥದಲ್ಲಿ ಸಭೆಯು ದೇವರ ಆಲಯವಾಗಿರುತ್ತದೆ. ಸಭೆಯು ದೇವರು ಮತ್ತು ಮನುಷ್ಯನು ಅನ್ಯೋನ್ಯತೆಯಲ್ಲಿ ಒಂದಾಗಿರುವಂಥದ್ದಾಗಿದೆ.

ಇಸ್ರಾಯೇಲ್ಯರು ಸಿನಾಯಿ ಬೆಟ್ಟವನ್ನು ತಲುಪಿದಾಗ, ದೇವರು ಅವರಿಗೆ ತನ್ನ ಧರ್ಮಶಾಸ್ತ್ರವನ್ನೂ ಆರಾಧನೆಯ ಒಂದು ಸ್ಥಳವನ್ನೂ ಮೋಶೆಯ ಮುಖಾಂತರ ಕೊಟ್ಟನು. ಆರಾಧನೆಯ ಸ್ಥಳವು "ದೇವದರ್ಶನ ಗುಡಾರ" ಎಂದು ಕರೆಯಲ್ಪಟ್ಟಿತು, ಯಾಕಂದರೆ ಅದು ಯೆಹೋವನು ಮೋಶೆಯನ್ನೂ ಯಾಜಕರನ್ನೂ ಹಾಗೂ ತನ್ನ ಜನರನ್ನೂ ಸಂದರ್ಶಿಸಿದ ಸ್ಥಳವಾಗಿತ್ತು (ವಿಮೋಚನಕಾಂಡ 29:42). ದೇವದರ್ಶನದ ಗುಡಾರದ ಬಾಗಿಲಿನ ಎದುರಿನಲ್ಲಿ ಪ್ರತಿನಿತ್ಯವೂ ಸರ್ವಾಂಗ ಹೋಮ ಗಳು ಅರ್ಪಿಸಲ್ಪಡುತ್ತಿದ್ದವು. ಯಾಕಂದರೆ, "... ಅಲ್ಲಿ ನಾನು ನಿಮಗೆ ದರ್ಶನ ಕೊಟ್ಟು ನಿನ್ನ ಸಂಗಡ ಮಾತಾಡುವೆನು. ಅಲ್ಲಿಯೇ ನಾನು ಇಸ್ರಾಯೇಲ್ಯರಿಗೆ ದರ್ಶನವನ್ನು ಕೊಡುವೆನು; ಅಲ್ಲಿ ಕಾಣಿಸುವ ನನ್ನ ಪ್ರಭಾವದಿಂದ ಆ ಸ್ಥಳವು ಪರಿಶುದ್ಧವಾಗಿರುವುದು" (ವಿಮೋಚನಕಾಂಡ 29:42, 43) ಎಂದು ದೇವರು ಹೇಳಿದನು. ದೇವರು ತಾನು ಮತ್ತು ತನ್ನ ಜನರು ಅನ್ಯೋನ್ಯತೆಯಲ್ಲಿ ಕೂಡಿಬರುವ ಒಂದು ಸ್ಥಳವನ್ನು ರೂಪಿಸಿದನು.

ಈಗ, ಕ್ರಿಸ್ತನ ಕೊನೆಯ ಮೃತ್ಯ ಪತ್ರದ ಮತ್ತು ಒಡಂಬಡಿಕೆಯ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ದೇವರು ಸಭೆಯನ್ನು ತನ್ನ ಜನರೊಂದಿಗೆ ಸಂದರ್ಶಿಸುವ ತನ್ನ ಸ್ಥಳವನ್ನಾಗಿ ಆಯ್ದು ಕೊಂಡಿದ್ದಾನೆ. ನಾವು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುವಾಗ ಯೇಸುವಿನ ರಕ್ತದಲ್ಲಿ ನಮ್ಮ ಪಾಪಗಳಿಂದ ತೊಳೆಯಲ್ಪಡುತ್ತೇವೆ ಮತ್ತು ದತ್ತು ಸ್ವೀಕಾರದ ಮುಖಾಂತರ ದೇವರ ಕುಟುಂಬದೊಳಗೆ ತರಲ್ಪಟ್ಟಿದ್ದೇವೆ (ಎಫೆಸ 1:5; ಗಲಾತ್ಯ 4:6). ಕ್ರೈಸ್ತರಾದವರು ದೇವರನ್ನು ತಿಳಿದವರು ಮಾತ್ರವೇ ಆಗಿರುವದಿಲ್ಲ, ಆದರೆ ದೇವರಿಂದ ತಿಳಿಯಲ್ಪಟ್ಟವರಾಗಿರುವರು ಮತ್ತು ದೇವರ ಬಾಧ್ಯಸ್ಥಿಕೆ ಯೊಳಗೆ ಬಂದಿರುವರು (ಎಫೆಸ 1:14; ಗಲಾತ್ಯ 4:9). ನಾವು ದೇವರ ಮಕ್ಕಳಾಗಿರುವೆವು, ಮತ್ತು ಮಕ್ಕಳಂತೆ, ನಾವು ಕ್ರಿಸ್ತನ ಮುಖಾಂತರ ನಿತ್ಯ ಜೀವದ ವಾರಸುದಾರರು ಆಗಿರುವೆವು (ರೋಮಾಪುರ 8:17; ಗಲಾತ್ಯ 4:7). ನಾವು ಸಭೆಯನ್ನು, ದೇವರ ಕುಟುಂಬವನ್ನು ಪ್ರವೇಶಿಸಿರುವೆವು, ಅಲ್ಲಿ ನಾವು ದೇವರೊಂದಿಗೆ ಸ್ನೇಹತ್ವದಲ್ಲಿ ಮತ್ತು ಅನ್ಯೋನ್ಯತೆಯಲ್ಲಿ, ಸಹಭಾಗಿತ್ವದಲ್ಲಿ ಮತ್ತು ಭ್ರಾತೃತ್ವದಲ್ಲಿ ನಡೆಯುವೆವು.

ವರ್ಷಗಳ ಹಿಂದೆ ಮಾರ್ಷಲ್ ಕೀಬಲ್ ಅವರ ಪ್ರಸಂಗಿಸುವಿಕೆಯಿಂದ ಸಭೆಯು ಆಶೀರ್ವದಿಸಲ್ಪಟ್ಟಿತು. ಅವರಲ್ಲಿ ಆತ್ಮಿಕ ಸತ್ಯಗಳನ್ನು ಉದಾಹರಿಸುವ ಆಕರ್ಷಕವಾದ

ವಿಧಾನವಿತ್ತು. ಅದು ಅವರ ಶ್ರೋತೃಗಳ ಗಮನವನ್ನು ಸೆರೆಹಿಡಿದು, ಮನಸ್ಸಿಗೆ ಸತ್ಯವನ್ನು ಬಿಂಬಿಸುವುದಾಗಿತ್ತು. ಬಾಪ್ತಿಸ್ಮದ ಮೇಲೆ ಒಂದು ರಾತ್ರಿ ಅವರು 1 ಪೇತ್ರ 3:21ನ್ನು ಉಲ್ಲೇಖಿಸಿದರು: "ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗ ಲಾಡಿಸುವಂಥದ್ದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳು ವಂಥದ್ದೇ." ಆಗ ಸಹೋದರ ಕೀಬಲ್ ಹೀಗೆ ಹೇಳಿದನು, "ಬಾಪ್ತಿಸ್ಮದಲ್ಲಿ ಮೂವರು ಹಾಜರಿರುತ್ತಾರೆ. ಮೊದಲನೆಯವನು ಬಾಪ್ತಿಸ್ಮ ಹೊಂದುವವನು, ಪಾಪಿಯು ಬಾಪ್ತಿಸ್ಮ ಹೊಂದಲು ಹಾಜರಿರುತ್ತಾನೆ. ಎರಡನೆಯವನು, ಪ್ರಸಂಗಿಯು, ಪಾಪಿಗೆ ಬಾಪ್ತಿಸ್ಮ ಮಾಡಿಸುವವನು ಬಾಪ್ತಿಸ್ಮ ಮಾಡಿಸಲು ಹಾಜರಿರುತ್ತಾನೆ. ಮೂರನೆಯವನು, ದೇವರು ಹಾಜರಿರುತ್ತಾನೆ. ಪ್ರಸಂಗಿಯೂ ಪಾಪಿಗೆ ಬಾಪ್ತಿಸ್ಮ ಮಾಡಿಸುವಾಗ, ದೇವರು ಮತ್ತು ಪಾಪಿಯು ನೀರಿನಲ್ಲಿ ಸಂಧಿಸುತ್ತಾರೆ."

ಮಾರ್ಷಲ್ ಕೀಬಲ್‌ನ ದೃಷ್ಟಾಂತವು ಹೇಳುವ ಅಂಶವನ್ನು ತರುತ್ತದೆ. ದೇವರು ಬಾಪ್ತಿಸ್ಮವನ್ನು ರಕ್ಷಣೆಯ ತನ್ನ ಯೋಜನೆಯ ಭಾಗವಾಗಿ ಆಜ್ಞಾಪಿಸಿದ್ದಾನೆ. ನಾವು ಕ್ರಿಸ್ತನ ಬಳಿಗೆ ಬರುವಾಗ ನಾವು ವಿಧೇಯರಾಗುವ ಅಂತಿಮ ಆಜ್ಞೆ ಅದಾಗಿದೆ. ನಂಬುವ, ಮಾನಸಾಂತರಪಟ್ಟ ಪಾಪಿಗಳು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವಾಗ, ಅವರು ದೇವರೊಂದಿಗೆ ಮತ್ತು ಕ್ರಿಸ್ತನೊಂದಿಗೆ ಐಕ್ಯತೆಗೊಳ್ಳುವರು (ರೋಮಾಪುರ 6:3; ಗಲಾತ್ಯ 4:6), ನೀರಿನಲ್ಲಿ ರಕ್ಷಿಸುವ ಸಂಬಂಧದಲ್ಲಿ ಅವರು ಸಂಧಿಸುವರು.

ಸುವಾರ್ತೆಯ ಅದ್ಭುತಕರವಾದ ವಾರ್ತೆಯು ದೇವರು ಪರಿಶುದ್ಧ ಅನ್ಯೋನ್ಯ ತೆಯಲ್ಲಿ ಮನುಷ್ಯನೊಂದಿಗೆ ಸಂಧಿಸಲು ಒಂದು ಸ್ಥಳವನ್ನು ಒದಗಿಸಿರುವನು ಮತ್ತು ಆ ಸ್ಥಳವು ಸಭೆಯಾಗಿರುತ್ತದೆ. ತಿರುಳಿನಲ್ಲಿ, ದೇವರು ತನ್ನ ವಾಕ್ಯದಲ್ಲಿ ಈ ಕ್ರೈಸ್ತ ಯುಗದಲ್ಲಿ ಮನುಷ್ಯನಿಗೆ ಹೀಗೆ ಹೇಳಿದ್ದಾನೆ, "ನನ್ನ ಆಲಯದಲ್ಲಿ, ಕ್ರಿಸ್ತನ ದೇಹದಲ್ಲಿ, ಸಭೆಯಲ್ಲಿ ನಾನು ನಿಮ್ಮೊಂದಿಗೆ ಸಂದರ್ಶಿಸುವೆನು. ಆತ್ಮಿಕ ಜೀವನಕ್ಕಾಗಿ ಮತ್ತು ಪರಿಶುದ್ಧ ಅನ್ಯೋನ್ಯತೆಗಾಗಿ ನೀವು ನನ್ನೊಂದಿಗೆ ಸಂದರ್ಶಿಸುವದಕ್ಕಾಗಿ ನಿಮಗೆ ರಕ್ಷಣೆಯ ಮಾರ್ಗವನ್ನು ಒದಗಿಸಿರುವೆನು."

## ಒಂದು ವಾಸಿಸುವ ಸ್ಥಳ

ಎರಡನೆಯದು, ಸಭೆಯು ದೇವರ ಆಲಯವಾಗಿರುವುದು ಯಾಕಂದರೆ ಅದು ದೇವರು ವಾಸಿಸುವ ಸ್ಥಳವಾಗಿರುವುದು. ದೇವರು ತನ್ನ ಆಲಯದಲ್ಲಿ ನಮ್ಮನ್ನು ಸಂದರ್ಶಿಸುವದಲ್ಲದೆ, ಆತನು ನಮ್ಮೊಂದಿಗೆ ಅದರಲ್ಲಿ ವಾಸಿಸುತ್ತಾನೆ. ಸಭೆಯ ಮುಖಾಂತರವಾಗಿ, ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುತ್ತಾನೆ.

ಮೋಶೆಯ ಧರ್ಮಶಾಸ್ತ್ರದಲ್ಲಿ ದೇವ ದರ್ಶನ ಗುಡಾರವನ್ನು ಕುರಿತು ದೇವರು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು, "ನಾನು ಇಸ್ರಾಯೇಲ್ಯರ ಮಧ್ಯದಲ್ಲಿ ವಾಸವಾಗಿದ್ದು ಅವರಿಗೆ ದೇವರಾಗಿರುವೆನು ತಮ್ಮ ಮಧ್ಯದಲ್ಲಿ ವಾಸವಾಗುವದಕ್ಕಾಗಿಯೇ ತಮ್ಮನ್ನು ಐಗುಪ್ತ ದೇಶದಿಂದ ಹೊರಗೆ ಬರಮಾಡಿದ ತಮ್ಮ ದೇವರಾದ ಯೆಹೋವನು ನಾನೇ ಎಂದು ಅವರು ತಿಳುಕೊಳ್ಳುವರು. ನಾನು ಅವರ ದೇವರಾದ ಯೆಹೋವನೇ" (ವಿಮೋಚನ ಕಾಂಡ 29:45, 46). ದೇವದರ್ಶನ ಗುಡಾರ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲವೂ ಇಸ್ರಾಯೇಲ್ಯರಿಗೆ ಅವರ ಮಧ್ಯದಲ್ಲಿ ದೇವರ ಪ್ರಸನ್ನತೆಯನ್ನು ಜ್ಞಾಪಕಕ್ಕೆ ತಂದವು. ಇಸ್ರಾಯೇಲ್ಯರಿಗೆ ದೇವರು ಮಾಡಿದ ವಾಗ್ದಾನಕ್ಕನುಗುಣವಾಗಿ, ಆತನು ದೇವದರ್ಶನ

ಗುಡಾರವನ್ನು ತನ್ನ ಮಹಿಮೆಯಿಂದ ತುಂಬಿಸಿದನು (ವಿಮೋಚನಕಾಂಡ 40:34). ದೇವರ ಸಾನ್ನಿಧ್ಯದ ಪ್ರಕಟನೆಯಂತೆ, ದೇವದರ್ಶನ ಗುಡಾರದ ಅತೀ ಪರಿಶುದ್ಧ ಸ್ಥಳದ ಮೇಲೆ, ಹಗಲಿನಲ್ಲಿ ಒಂದು ಮೇಘ ಸ್ಥಂಭವೂ ಮತ್ತು ರಾತ್ರಿಯಲ್ಲಿ ಒಂದು ಅಗ್ನಿಸ್ಥಂಭವೂ ನಿಂತುಕೊಂಡವು. ಹಗಲಿನಲ್ಲಿ ಇಸ್ರಾಯೇಲ್ಯರು ಚಲಿಸಿದಾಗ, ದೇವರ ಮಾರ್ಗದರ್ಶನದ ವ್ಯಕ್ತಪಡಿಸುವಿಕೆಯಂತೆ - ಮೇಘ ಸ್ಥಂಭವು ಅವರ ಮುಂದೆ ಹೋಗುತ್ತಿತ್ತು; ಅಗ್ನಿ ಸ್ಥಂಭವು ರಾತ್ರಿಯಲ್ಲಿ ದೇವರ ನಡಿಸುವಿಕೆಯನ್ನು ಒದಗಿಸಿತು (ವಿಮೋಚನಕಾಂಡ 40:36-38; ಅರಣ್ಯಕಾಂಡ 9:15-23). ದೇವ ದರ್ಶನ ಗುಡಾರದ ಮುಖಾಂತರವಾಗಿ ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುತ್ತ ಅವರನ್ನು ನಡಿಸುತ್ತಿದ್ದನು.

ಹೊಸ ಒಡಂಬಡಿಕೆಯಲ್ಲಿ, ಸಭೆಯು ದೇವರು ತನ್ನ ಆತ್ಮನ ಮುಖಾಂತರ ವಾಸಿಸುವ ಸ್ಥಳವಾಗಿದೆ, ಕೊರಿಂಥದಲ್ಲಿಯ ಸಭೆಯವರಿಗೆ ಪೌಲನು ಹೀಗೆ ಬರೆದನು, "ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ; ಇದರ ಸಂಬಂಧವಾಗಿ 'ದೇವರು - ನಾನು ಅವರಲ್ಲಿ ವಾಸಿಸುತ್ತ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು' " (2 ಕೊರಿಂಥ 6:16). ಎಫೆಸ 2ರಲ್ಲಿ, ಕ್ರೈಸ್ತರಾದ ಅನ್ಯರಿಗೆ ಪೌಲನು ಹೀಗೆ ಹೇಳಿದನು,

> ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ (ಎಫೆಸ 2:19-22).

ಕ್ರೈಸ್ತರಲ್ಲಿ ದೇವರು ಎರಡು ಮಾರ್ಗದಲ್ಲಿ ವಾಸಿಸುತ್ತಾನೆ: ಮೊದಲನೆಯದು, ಕ್ರೈಸ್ತನ ಹೃದಯವನ್ನು ತನ್ನ ಆಲಯದಂತೆ ಉಪಯೋಗಿಸುತ್ತ, ಪ್ರತಿಯೊಬ್ಬ ಕ್ರೈಸ್ತನಲ್ಲಿ ಆತನ ಆತ್ಮವು ವಾಸಿಸುತ್ತದೆ. ಪೌಲನು ಆತ್ಮನು, ಅಂತರ್ಯದಲ್ಲಿ ವಾಸಿಸುವದನ್ನು ಕ್ರೈಸ್ತರು ತಮ್ಮ ದೇಹಗಳನ್ನು ಅನೈತಿಕತೆಯಿಂದ ದೂರವಾಗಿ ಶುದ್ಧವಾಗಿಟ್ಟುಕೊಳ್ಳಬೇಕೆಂಬ ವಾದದ ವಿಚಾರವನ್ನು ಉಪಯೋಗಿಸಿದನು: "ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ ... ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ?" (1 ಕೊರಿಂಥ 6:18, 19).

ಎರಡನೆಯದು, ದೇವರ ಆತ್ಮನು ಕ್ರೈಸ್ತರ ಸಾಮುದಾಯಕ ದೇಹದಲ್ಲಿ, ಸಭೆಯಲ್ಲಿ ವಾಸಿಸುತ್ತಾನೆ, ಕೊರಿಂಥದ ಸಭೆಯನ್ನು ಕುರಿತು ಪೌಲನು ಬರೆದನು, "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16). ಈ ವಚನದಲ್ಲಿ "you"ಗಾಗಿ ಪೌಲನು ಉಪಯೋಗಿಸಿದ ಗ್ರೀಕ ಪದವು ಬಹುವಚನದಲ್ಲಿದೆ. ಆತ್ಮನಿಗೆ ಮನಸ್ಸಿನಲ್ಲಿ ವಿಶ್ವಾಸಿಗಳ ದೇಹವು, ಸಭೆಯು, ಸ್ಪಷ್ಟವಾಗಿದೆ ಮತ್ತು ಕೇವಲ ವೈಯಕ್ತಿಕ ಕ್ರೈಸ್ತನಲ್ಲ.

ದೇವರು ತನ್ನ ಜನಾಂಗದ ಮಧ್ಯದಲ್ಲಿ ಹೇಗೆ ವಾಸಿಸುವನು ಎಂಬುದರ ಬಗ್ಗೆ ನಮಗೆ ಪ್ರಶ್ನೆಗಳಿವೆ. ಹೀಗಿದ್ದರೂ, ಒಂದು ಸತ್ಯದ ಬಗ್ಗೆ ನಿಶ್ಚಿತತೆಯುಳ್ಳವರಾಗಿರಬಹುದಾದದ್ದು,

ಆಂತರ್ಯದಲ್ಲಿ ಆತನ ವಾಸಿಸುವಿಕೆಯು ಆತನ ವಾಕ್ಯಕ್ಕೆ ಅನುಗುಣವಾಗಿತ್ತು, ಯಾಕಂದರೆ ದೇವರು ಆತನ ವಾಕ್ಯದ ಮುಖಾಂತರ ಕಾರ್ಯಮಾಡುತ್ತಾನೆ (ಎಫೆಸ 6:17). ಈ ವಾಕ್ಯಭಾಗಗಳಲ್ಲಿ, ಪೌಲನು ದೇವರು ಆಂತರ್ಯದಲ್ಲಿ ವಾಸಿಸುವದನ್ನು ವಿವರವಾಗಿ ವಿವರಿಸಿರುವದಿಲ್ಲ; ಅವನು ಅದನ್ನು ದೃಢಪಡಿಸಿದನು. ಈ ವಾಕ್ಯಭಾಗಗ ಳಲ್ಲಿ ನಿಜವಾದ ಕ್ರೈಸ್ತರು ಕಂಡುಕೊಳ್ಳಬೇಕಾದದ್ದು, ದೇವರು ವೈಯಕ್ತಿಕವಾಗಿ ಮತ್ತು ಸಾಮುದಾಯಕವಾಗಿ ನಮ್ಮೊಂದಿಗಿರುವನು ಎಂಬುದು. ಆತನು ನಮ್ಮೊಂದಿಗಿರುವನು; ಆತನು ನಮ್ಮಲ್ಲಿ ವಾಸಿಸುವನು.

ಎಂಬತ್ತು ವರ್ಷಗಳ ವಯಸ್ಸಿನಲ್ಲಿ ಮೋಶೆಯು ಹೋರೇಬಿನ ಉರಿಯುವ ಪೊದೆಯಲ್ಲಿ ದೇವರನ್ನು ಸಂದರ್ಶಿಸಿದನು (ವಿಮೋಚನಕಾಂಡ 3:1). ದೇವರು ಅವನಿಗೆ, "... ನನ್ನ ಜನರಾಗಿರುವ ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಹೊರಗೆ ಬರ ಮಾಡುವದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ" (ವಿಮೋಚನಕಾಂಡ 3:10) ಎಂದು ಹೇಳಿದನು. ದೇವರಿಗಾಗಿ ಐಗುಪ್ತಕ್ಕೆ ಹೋಗ ಬೇಕಾದವನು ತಾನು ಎಂಬುದನ್ನು ಮೋಶೆಯು ನಂಬಲಿಲ್ಲ, ಆದರೆ ದೇವರು ಅವನ ನೆವಗಳಿಗೆ ಉತ್ತರ ಕೊಟ್ಟನಂತರ, ಮೋಶೆಯು ಉರಿಯುವ ಪೊದೆಯನ್ನು ಬಿಟ್ಟನು ಮತ್ತು ಜಜ್ಜಲ್ಪಟ್ಟ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡುವ ನಿಯೋಗದೊಂದಿಗೆ ಐಗುಪ್ತಕ್ಕೆ ಹೋದನು. ಬೇಗನೇ ಮೋಶೆಯು ದೇವರನ್ನು *ಸಂದರ್ಶಿಸುವದರ* ಮತ್ತು ದೇವರೊಂದಿಗೆ *ನಡೆಯುವದರ* ಮಧ್ಯದಲ್ಲಿಯ ಭಿನ್ನತೆಯನ್ನು ನೋಡಿದನು. ಅವನು ಹೋರೇಬಿನಲ್ಲಿ ದೇವರನ್ನು ಸಂದರ್ಶಿಸಿದ್ದನು ಮತ್ತು ಆತನ ಅಪ್ಪಣೆಯನ್ನು ಹೊಂದಿಕೊಂಡಿದ್ದನು. ಹೋರೇಬನ್ನು ಬಿಟ್ಟು, ದೇವರೊಂದಿಗೆ ನಡೆದು ಹೋಗಿದ್ದನು, "ನಾನೇ ನಿನ್ನೊಂದಿಗಿರು ವೆನು ..." (ವಿಮೋಚನಕಾಂಡ 3:12) ಎಂದು ಕರ್ತನಿಂದ ಮೋಶೆಗೆ ಹೇಳಲ್ಪಟ್ಟಿತ್ತು. ದೇವರು ತನ್ನ ವಾಗ್ದಾನವನ್ನು ಕೈಕೊಂಡನು ಮತ್ತು ಎಲ್ಲಾ ಬಾಧೆಗಳ ಮುಖಾಂತರ, ಕೆಂಪು ಸಮುದ್ರದ ಮುಖಾಂತರ, ಮತ್ತು ಸಿನಾಯಿ ಬೆಟ್ಟಕ್ಕೆ ಮೋಶೆಯು ಇಸ್ರಾಯೇಲ್ಯ ರನ್ನು ನಡಿಸಿದಂತೆ ಮೋಶೆಯೊಂದಿಗೆ ನಡೆದನು.

ಸಭೆಯಾಗಿ, ದೇವರ ಆಲಯವಾಗಿ, ನಾವು ಕ್ರಿಸ್ತನಲ್ಲಿ ದೇವರನ್ನು ಸಂದರ್ಶಿಸಿದ್ದಲ್ಲದೇ, ದೇವರು ಸತತವಾಗಿ ನಮ್ಮಲ್ಲಿ ವಾಸಿಸುತ್ತಾನೆ ಮತ್ತು ನಮ್ಮೊಂದಿಗೆ ನಡೆಯುತ್ತಾನೆ. ಕ್ರೈಸ್ತರು ಎಷ್ಟು ನಂಬಿಕೆಯುಳ್ಳವರೂ ಭರವಸೆಯುಳ್ಳವರೂ ಆಗಿರಬೇಕು! ನಂಬಿಕಸ್ತಿಕೆಯಿಂದ ಕ್ರೈಸ್ತ ಜೀವಿತ ಜೀವಿಸುವಂತೆ ನಾವು ದೇವರೊಂದಿಗೆ ಅನ್ಯೋನ್ಯತೆ ಯಲ್ಲಿ ನಾವು ನಡೆಯುವೆವು, ಆತನ ಅಶೀರ್ವಾದಕರವಾದ ಅನ್ಯೋನ್ಯತೆ ಮತ್ತು ಬಲವಿಲ್ಲದೇ ನಾವು ಒಂದು ಶ್ರಮೆಯನ್ನು ಇಲ್ಲವೇ ತೊಂದರೆಯನ್ನು ಎದುರಿಸುವದಿಲ್ಲ.

ಯೋಹಾನನು ಹೀಗೆ ಬರೆದಿದ್ದಾನೆ, "ನಾವು ದೇವರ ಸಂಗಡ ಅನ್ಯೋನ್ಯತೆಯು ಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನು ಅನುಸರಿಸುವವರಲ್ಲ. ಆದರೆ ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ" (1 ಯೋಹಾನ 1:6, 7).

## ಒಂದು ಆರಾಧನೆಯ ಸ್ಥಳ

ಮೂರನೆಯದಾಗಿ, ಸಭೆಯು, ದೇವರ ಆಲಯದಂತೆ ಆರಾಧನೆಯ ಸ್ಥಳವಾಗಿದೆ. ಕ್ರೈಸ್ತನು ನಡೆದಾಡುವ ಮಹಾದೇವಾಲಯವಾಗಿದೆ.

“ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮುಖಾಂತರ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪರಿಶುದ್ಧ ಯಾಜಕವರ್ಗದವರಾಗಿದ್ದೀರಿ” (1 ಪೇತ್ರ 2:5) ಎಂದು ಪೇತ್ರನು ಹೇಳಿದನು. “ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ” (1 ಪೇತ್ರ 2:9) ಎಂದೂ ಅವನು ಹೇಳಿದನು. ಇಂದು ದೇವರು ಯಾಜಕರಂತೆ, ಕ್ರೈಸ್ತರು ಯೇಸುವಿನ ಮೂಲಕ ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ದೇವರಿಗೆ ಸ್ತೋತ್ರಗಳನ್ನು ಸಮರ್ಪಿಸಬಹುದು. ಯೇಸು ಕ್ರಿಸ್ತನ ನಿಮಿತ್ತವಾಗಿ, ಭರವಸೆಯಿಂದ ದೇವರನ್ನು ಸಮೀಪಿಸ ಬಹುದೆಂದು ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನಿಂದ ನಾವು ಒತ್ತಾಯಿಸಲ್ಪಟ್ಟಿದ್ದೇವೆ: “ಆದುದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ” (ಇಬ್ರಿಯ 4:16).

ಯಾಕೋಬನ ಬಾವಿಯ ಬಳಿಯಲ್ಲಿ ಸಮಾರ್ಯದ ಸ್ತ್ರೀಗೆ ಯೇಸುವು ಇನ್ನು ಮುಂದೆ ಆರಾಧನೆಯು ಒಂದು ನಿರ್ದಿಷ್ಟವಾದ ಸ್ಥಳಕ್ಕೆ ಮಿತಿಗೊಂಡಿರುವದಿಲ್ಲ, ದೈವಿಕ ವಾಗಿ ನೇಮಿಸಲ್ಪಟ್ಟ ಪರ್ವತಕ್ಕೂ ಇಲ್ಲವೇ ಕಟ್ಟಡಕ್ಕೂ ಮಿತಿಗೊಂಡಿರುವದಿಲ್ಲ ಎಂದು ಹೇಳಿದನು. “ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ, ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ” (ಯೋಹಾನ 4:21) ಎಂದು ಹೇಳಿದನು. ಭವಿಷ್ಯದಲ್ಲಿ ಆರಾಧನೆಯು ಆತ್ಮದಿಂದ ಮತ್ತು ಸತ್ಯದಿಂದ ಅರ್ಪಿಸಲ್ಪಡುವದರಿಂದ ಅದು ಸ್ವೀಕಾರ ಯೋಗ್ಯವಾಗಿರುವದೆಂದು ಆತನು ಹೇಳುತ್ತಿದ್ದನು. ಅದು ಸರಿಯಾದ ಸ್ಥಳದಲ್ಲಿ ಅರ್ಪಿಸಲ್ಪಡುವ ಕಾರಣದಿಂದ ಅಲ್ಲ “ಅದಿರಲಿ: ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ” (ಯೋಹಾನ 4:23) ಎಂದೂ ಆತನು ಸಮಾರ್ಯದ ಸ್ತ್ರೀಗೆ ಹೇಳಿದನು. ದೇವರ ಯಾಜಕರಂತೆ ಕ್ರೈಸ್ತರು ಎಲ್ಲಿಯಾಗಲೀ, ಯಾವುದೇ ಸ್ಥಳದಲ್ಲಿ ಕ್ರಿಸ್ತನ ಮುಖಾಂತರ ದೇವರನ್ನು ಆರಾಧಿಸುವ, ಕ್ರೈಸ್ತ ಯುಗದ ಬಗ್ಗೆ ಯೇಸುವು ಮಾತಾಡುತ್ತಿದ್ದನು.

ದೇವರ ಕಡೆಗೆ ಸಂಪೂರ್ಣ ಮಾರ್ಗವಿದ್ದು, ಕ್ರೈಸ್ತರು ಆರಾಧನೆಯ ಅವಕಾಶಗಳೊಂದಿಗೆ (ಯೋಹಾನ 4:23), ಪ್ರಾಯಶ್ಚಿತ್ತದ ಒದಗಿಸುವಿಕೆಗ ಳೊಂದಿಗೆ (1 ಯೋಹಾನ 2:1), ಮತ್ತು ದೈವಿಕ ಬಲದೊಂದಿಗೆ (ಎಫೆಸ 1:19) ಆಶೀರ್ವದಿಸಲ್ಪಟ್ಟಿದ್ದಾರೆ. ಬಹಳವಾಗಿ, ವಿಪುಲವಾಗಿ ತುಂಬಿಸಲ್ಪಟ್ಟ ದೇವರ ಯಾಜಕರಂತೆ, “ದೇವರಿಗೆ ಸ್ತೋತ್ರ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವುದೇ ನಾವು ಅರ್ಪಿಸುವ ಯಜ್ಞವಾಗಿದೆ” (ಇಬ್ರಿಯ 13:15).

# ಮುಕ್ತಾಯ

ಸಭೆಯು ದೇವರ ಆಲಯವಾಗಿರುತ್ತದೆ, ಎಂಥಾ ಆಹ್ವಾನಕರವಾದ ಸತ್ಯ! ದೇವರ ಆಲಯ, ಸಭೆಯು ದೇವರು ಸಂದರ್ಶಿಸುವ ಸ್ಥಳ, ದೇವರು ವಾಸಿಸುವ ಸ್ಥಳ, ಮತ್ತು ದೇವರನ್ನು ಆರಾಧಿಸಲಿಕ್ಕೆ ನಮ್ಮ ಸ್ಥಳವಾಗಿದೆ.

ನೀನು ಕ್ರಿಸ್ತನ ಸಭೆಯ ಸದಸ್ಯನಾಗಿರುವಿಯೋ? ನೀನು ಕ್ರಿಸ್ತನ ಹೊರಗೆ ಇದ್ದರೆ, ನೀನು ತಪ್ಪಿಸಿಕೊಂಡಿರುವ ಎಲ್ಲದರ ಬಗ್ಗೆ ಯೋಚಿಸು. ಆತನ ಹೊರಗೆ, ಆತನು ಜನರನ್ನು ಸಂದರ್ಶಿಸುವ ಸ್ಥಳ ಹೊರಗೆ ಇರುವಿ, ನೀನು ನಿಜವಾಗಿಯೂ ದೇವರನ್ನು ಸಂದರ್ಶಿಸಿರುವದಿಲ್ಲ, ಇಲ್ಲವೇ ನೀನು ಎಂತಾ ಧಾರ್ಮಿಕನಾಗಿದ್ದರೂ ಆತನ ಬಳಿಗೆ ಬಂದಿರುವದಿಲ್ಲ. ಆತನ ಹೊರಗೆ, ನೀನು ದೇವರೊಂದಿಗೆ ವಾಸಿಸಲಾರಿ. ನೀನಿರುವಲ್ಲಿ ಆತನೊಂದಿಗೆ ನೀನು ಜೀವಿಸಲಾರಿ ಮತ್ತು ಆತನೊಂದಿಗೆ ನಡೆದಾಡಲಾರಿ. ಆತನ ಹೊರಗೆ, ಸ್ವೀಕಾರ ಯೋಗ್ಯವಾಗಿ ನೀನು ದೇವರನ್ನು ಆರಾಧಿಸಲಾರಿ. ಆತನು ನೇಮಕ ಮಾಡಿದ ರೀತಿಯಲ್ಲಿ ನೀನಿರುವಲ್ಲಿ ನೀನು ಆತನನ್ನು ಆರಾಧಿಸಲಾರಿ ಮತ್ತು ಆತನು ನೇಮಕ ಮಾಡಿದ ಸ್ಥಳದಿಂದ ಕ್ರೈಸ್ತನ ಹೃದಯದಿಂದ ಆರಾಧಿಸಲಾರಿ. ಕ್ರಿಸ್ತನ ದೇಹದ ಹೊರಗೆ ನೀನು ಇದ್ದರೆ, ಜೀವನದಲ್ಲಿ ಮತ್ತು ನಿತ್ಯತ್ವದಲ್ಲಿ ದೇವರೊಂದಿಗೆ ನೀನು ನಡೆಯಲಿಕ್ಕಾಗುವಂಥೆ, ಆತನ ದೇಹವನ್ನು ಪ್ರವೇಶಿಸಲು ತೀರ್ಮಾನಿಸಿಕೋ (ರೋಮಾಪುರ 6:3).

ದೇವರ ಸಾನ್ನಿಧ್ಯವನ್ನೂ ಒದಗಿಸುವಿಕೆಗಳನ್ನು ಅನುಭವಿಸಬೇಕಾದರೆ, ನೀನು ದೇವರ ಉದ್ದೇಶದ ಸ್ಥಳದಲ್ಲಿ ಇರತಕ್ಕದ್ದು. ಮೋಶೆಗಾಗಿ ದೇವರ ಉದ್ದೇಶವು ಐಗುಪ್ತಕ್ಕೆ ಹೋಗಿ ಅವನು ದೇವರ ಜನಾಂಗವನ್ನು ಬಿಡುಗಡೆ ಮಾಡುವದಕ್ಕಾಗಿತ್ತು. ಮೋಶೆಯು ವಿರುದ್ಧ ದಿಕ್ಕಿಗೆ ಹೋಗುತ್ತಿದ್ದರೆ ಏನಾಗುತ್ತಿತ್ತು? ಅವನು ದೇವರ ಪ್ರಸನ್ನತೆ, ಒದಗಿಸುವಿಕೆ ಮತ್ತು ಬಲ ಇಲ್ಲದೇ ಹೋಗಬಹುದಿತ್ತು. ಇದು ಸತ್ಯವಾಗಿದೆ, ಯಾಕಂದರೆ ಅವನು ದೇವರ ಉದ್ದೇಶಗಳ ಹೊರಗೆ ಇರುವವನಾಗುತ್ತಿದ್ದನು. ನಿನೆವೆಗೆ ಹೋಗಬೇಕೆಂದು ದೇವರು ಯೋನನಿಗೆ ಹೇಳಿದನು, ಆದರೆ ಯೋನನು ತಾರ್ಷೀಷಿಗೆ ಹೊರಟನು, "... ಯೊಪ್ಪಕ್ಕೆ ಇಳಿದು ಅಲ್ಲಿ ತಾರ್ಷೀಷಿಗೆ ತೆರಳುವ ಹಡಗನ್ನು ಕಂಡು ಬಾಡಿಗೆಕೊಟ್ಟು *ಯೆಹೋವನ ಸನ್ನಿಧಿಯಿಂದ ತಾರ್ಷೀಷಿಗೆ* ಪ್ರಯಾಣ ಮಾಡಬೇಕೆಂದು ಹಡಗಿನವರೊಡನೆ ಅದನ್ನು ಹತ್ತಿದನು" (ಯೋನ 1:3; ಒತ್ತಿ ಹೇಳಿದ್ದು ನನ್ನದು) ಎಂದು ಬೈಬಲ್ ಹೇಳುತ್ತದೆ. ದೇವರ ಜೊತೆಗಾರಿಕೆಯೊಂದಿಗೆ, ಯೋನನು ನಿನೆವೆಗೆ ಹೋಗಬೇಕಾಗಿತ್ತು ಆದರೆ ತಾರ್ಷೀಷ ಪಟ್ಟಣಕ್ಕೆ ಅಲ್ಲ, ನಿನೆವೆಯು ದೇವರ ಉದ್ದೇಶದ ಸ್ಥಳವಾಗಿತ್ತು; ತಾರ್ಷೀಷ ಆಗಿರಲಿಲ್ಲ.

ಸಭೆಯಲ್ಲಿ, ದೇವರ ಆಲಯದಲ್ಲಿ ಬರುವ ಯಾವನಾದರೂ, ದೇವರ ಉದ್ದೇಶ ಗಳೊಳಗೆ ಮತ್ತು "ನಾನು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರಿ" (2 ಕೊರಿಂಥ 6:18) ದೇವರು ಯಾರಿಗೆ ಹೇಳಿದನೋ ಆ ದೇಹದೊಳಗೆ ಬರುತ್ತಾನೆ, ಒಬ್ಬನು ಕ್ರೈಸ್ತನಾಗುವಾಗ, ಅವನ ಮಣ್ಣಿನ ಮನೆಯು, ಅವನ ದೇಹವು ದೇವರ ಮಹಿಮೆಯುಳ್ಳ ಆಲಯವಾಗುವುದು!

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. "ನಮ್ಮ ಹೃದಯಗಳು ನಿನ್ನಲ್ಲಿ ವಿಶ್ರಾಂತಿಯನ್ನು ಪಡೆಯುವವರೆಗೆ ವಿಶ್ರಾಂತಿ ಯಿಲ್ಲದವುಗಳಾಗಿರುತ್ತವೆ" ಎಂದು ಔಗುಸ್ತೀನನು ಹೇಳಿದನು. ಈ ಹೇಳಿಕೆಯ ಅರ್ಥ ವೇನು?
2. ದೇವರು ತನ್ನೊಂದಿಗೆ ನಮ್ಮ ಅನ್ಯೋನ್ಯತೆಯಿರಬೇಕೆಂದು ಬಯಸುತ್ತಾನೆಂಬುದಕ್ಕೆ ನಮ್ಮಲ್ಲಿ ಯಾವ ಪುರಾವೆಯಿದೆ? ಇದು ಸತ್ಯವಾಗಿದೆ ಎಂದು ನಂಬುವದಕ್ಕಾಗಿ ಕಾರಣಗಳ ಯಾದಿ ಮಾಡಿರಿ.
3. ದೇವರು ನಮ್ಮ ಅನ್ಯೋನ್ಯತೆಯನ್ನು ಬಯಸುತ್ತಾನೆ ಎಂಬದನ್ನು ಬೋಧಿಸುವ ಪರಿಶುದ್ಧ ಬರಹಗಳ ಯಾದಿ ಮಾಡಿರಿ.
4. ಸಭೆಯು ಹೇಗೆ ದೇವರ ಮತ್ತು ಮನುಷ್ಯನ "ಸಂದರ್ಶನದ ಸ್ಥಳವಾಗಿರುವುದು"?
5. ಹಳೇ ಒಡಂಬಡಿಕೆಯ ಅವಧಿಯಲ್ಲಿ ದೇವರಿಗೂ ಮನುಷ್ಯನಿಗೂ ಅನ್ಯೋನ್ಯತೆಯು ಹೇಗೆ ಇತ್ತು?
6. ಕ್ರೈಸ್ತ ಯುಗದಲ್ಲಿ ಸಭೆಯು ದೇವರ "ವಾಸಿಸುವ ಸ್ಥಳ" ಹೇಗೆ ಆಗಿರುವುದು ಎಂಬುದನ್ನು ಚರ್ಚಿಸಿರಿ.
7. ದೇವದರ್ಶನ ಗುಡಾರವು ದೇವರು ವಾಸಿಸುವ ಸ್ಥಳವನ್ನು ಇಸ್ರಾಯೇಲ್ಯರಿಗೆ ಹೇಗೆ ಜ್ಞಾಪಿಸಿತು?
8. ದೇವರು ಕ್ರೈಸ್ತರಲ್ಲಿ ವಾಸಿಸುವ ಎರಡು ಮಾರ್ಗಗಳನ್ನು ಚರ್ಚಿಸಿರಿ (1 ಕೊರಿಂಥ 6:18, 19; 3:16).
9. ಕ್ರಿಸ್ತನ ಸಭೆಯು ಹೇಗೆ "ಆರಾಧನೆಯ ಒಂದು ಸ್ಥಳವಾಗಿರುವುದು"?
10. ನಿಜವಾದ ಆರಾಧನೆಯೊಂದಿಗೆ ಸಂಬಂಧದಲ್ಲಿ ಭೌತಿಕ ಸ್ಥಳವನ್ನು ಚರ್ಚಿಸಿರಿ.
11. ಸಭೆಯು ದೇವರ ಆಲಯವಾಗಿರುವದರಿಂದ, ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿ ಅನುಭವಿಸಲ್ಪಟ್ಟ ಆಶೀರ್ವಾದಗಳಿಗೆ ವಿರುದ್ಧವಾಗಿ ಇಂದು ನಾವು ಅನುಭವಿಸುವ ಆಶೀರ್ವಾದಗಳ ಯಾದಿ ಮಾಡಿರಿ.
12. ಇಂದು ನಾವು ದೇವರ ಆಲಯವನ್ನು ಹೇಗೆ ಪ್ರವೇಶಿಸುವೆವು?

© 2009 Truth for Today